ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜ ನಿ : ಸುಮಪ : 2020–21 ದಿನಾಂಕ : 05–08–2020

# ಪತ್ರಿಕಾ ಪ್ರಕಟಣೆ

## ರಾಜ್ಯದಲ್ಲಿ ಜಿಮ್–ಫಿಟ್ನೆಸ್ ಕೇಂದ್ರಗಳನ್ನು ತೆರೆಯಲು ಮಾರ್ಗಸೂಚಿ ಪ್ರಕಟ

ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ) :

ರಾಜ್ಯದಲ್ಲಿ ಕಳೆದ ನಾಲ್ಕು ತಿಂಗಳುಗಳಿಂದ ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಮುಚ್ಚಲಾಗಿದ್ದ ಜಿಮ್ ಹಾಗೂ ಫಿಟ್ನೆಸ್ ಕೇಂದ್ರಗಳನ್ನು ತೆರೆಯಲು ಅನುವಾಗುವಂತೆ ಅನುಸರಿಸಬೇಕಾದ ಮುಂಜಾಗರೂಕತಾ ಕ್ರಮಗಳ ವಿವರ ಒಳಗೊಂಡ ಕೈಪಿಡಿಯನ್ನು ರಾಜ್ಯ ಸರ್ಕಾರ ಇಂದು ಬಿಡುಗಡೆ ಮಾಡಿದೆ.

ಭಾರತ ಸರ್ಕಾರವು ಅನ್‌ಲಾಕ್–3 ಅಂಗವಾಗಿ ಆಗಸ್ಟ್ 5 ರಿಂದ ಜಿಮ್‌ಗಳನ್ನು ತೆರೆಯಲು ಅನುಮತಿ ನೀಡಿದೆ. ತಡೆಗಟ್ಟಲು ಅನುಸರಿಸಬೇಕಾದ ಮುಂಜಾಗರೂಕತಾ ಕ್ರಮಗಳ ವಿವರ ಒಳಗೊಂಡ ಕೈಪಿಡಿಯನ್ನು ಯುವ ಸಬಲೀಕರಣ ಮತ್ತು ಕ್ರೀಡೆ, ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಟಿ. ರವಿ ರವರು ಇಂದು ಬಿಡುಗಡೆ ಮಾಡಿದರು.

ಜಿಮ್ ಹಾಗೂ ಫಿಟ್ನೆಸ್ ಕೇಂದ್ರಗಳ ಬಳಕೆದಾರರು ಅಕಾಡೆಮಿ/ಜಿಮ್–ಫಿಟ್ನೆಸ್‌ಕೇಂದ್ರವನ್ನು ಪ್ರವೇಶಿಸುವ ಸಂದರ್ಭದಲ್ಲಿ ಸಂಪರ್ಕ ರಹಿತ ಮಾಪಕ ಬಳಸಿ **(Using non-contact thermal gun)**,ದೇಹದ ಉಷ್ಣಾಂಶವನ್ನು ಪರೀಕ್ಷಿಸಿ, ಕೈಗಳನ್ನು ಸೋಂಕು ನಿವಾರಕದಿಂದ ಶುಚಿಗೊಳಿಸಿ ಪ್ರವೇಶ ನೀಡುವುದು. ಜ್ವರ, ಕೆಮ್ಮು, ಶೀತ ಬಾಧೆ ಹೊಂದಿರುವವರಿಗೆ ಪ್ರವೇಶ ನಿರಾಕರಿಸುವುದು ಹಾಗೂ ಅಕಾಡೆಮಿ/ಜಿಮ್–ಫಿಟ್ನೆಸ್ ಕೇಂದ್ರದಲ್ಲಿ ಕಡ್ಡಾಯವಾಗಿ ಉಸಿರಾಟದ ಶುಚಿತ್ವವನ್ನು**(Respiratory Hygiene)**ಖಾತರಿಪಡಿಸುವುದು. ಬಳಕೆದಾರರ ಸಂಪೂರ್ಣ ವಿಳಾಸ ಮತ್ತು ಸಂಪರ್ಕ ದೂರವಾಣಿ/ಮೊಬೈಲ್, ವಯಸ್ಸು ಮತ್ತಿತರ ವಿವರ ಒಳಗೊಂಡಂತೆ ಪೂರ್ವಭಾವಿ ನೋಂದಾವಣೆ ಕೈಗೊಂಡು, ದಾಖಲೆ ವಹಿ ನಿರ್ವಹಿಸುವುದು ಹಾಗೂ ಪ್ರತಿ ದಿನದ ಬಳಕೆದಾರರು ಕೇಂದ್ರ ಪ್ರವೇಶಿಸಿದ ಹಾಗೂ ನಿರ್ಗಮಿಸಿದ ಸಮಯದಾಖಲಿಸುವುದು.

'ಕೋವಿಡ್-19 ನಿಯಂತ್ರಣಾ ಪ್ರದೇಶ'(Containment zones)ಗಳಲ್ಲಿ ಜಿಮ್‌ಗಳು ಮತ್ತು ಫಿಟ್ನೆಸ್ ಕೇಂದ್ರಗಳನ್ನು ಸಾರ್ವಜನಿಕರ ಪ್ರವೇಶಕ್ಕೆ ತೆರೆಯುವುದನ್ನು ನಿಷೇಧಿಸಿದೆ. ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆರೋಗ್ಯ ಸಂಬಂಧಿತ 'ಮಾದರಿ ನಿರ್ವಹಣಾ ಮಾರ್ಗಸೂಚಿ'(SOP) ಹಾಗೂ ಅಧಿಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಕ್ರೀಡಾಪಟು/ಜಿಮ್-ಫಿಟ್ನೆಸ್‌ಕೇಂದ್ರ ಬಳಕೆದಾರರು ಮತ್ತು ಸಿಬ್ಬಂದಿ ಕನಿಷ್ಟ 6 ಅಡಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ಸೂಕ್ತ ವ್ಯವಸ್ಥೆ ಕಲ್ಪಿಸುವುದು. ಎಲ್ಲಾ ಬಳಕೆದಾರರು ಕಡ್ಡಾಯವಾಗಿ ಮಾಸ್ಕ್ ಧರಿಸತಕ್ಕದ್ದು. ಅಕಾಡೆಮಿ/ಜಿಮ್-ಫಿಟ್ನೆಸ್ ಕೇಂದ್ರವನ್ನು ಪ್ರತಿ ದಿನ ಸೋಂಕು ನಿವಾರಕಗಳಿಂದ ಶುಚಿಗೊಳಿಸುವುದು. ಹತ್ತು ವರ್ಷ ವಯೋಮಾನದೊಳಗಿನವರು ಹಾಗೂ 65 ವರ್ಷ ಮೇಲ್ಪಟ್ಟವರಿಗೆ ಮತ್ತು ಗರ್ಭಿಣಿಯರಿಗೆ ಪ್ರವೇಶ ನಿಷೇಧಿಸಿದೆ. ಅಕಾಡೆಮಿ/ಜಿಮ್-ಫಿಟ್ನೆಸ್ ಕೇಂದ್ರದಲ್ಲಿ ನೀರು ಹಾಗೂ ಸಾಬೂನಿನ ಸೌಕರ್ಯ ಕಲ್ಪಿಸುವುದು. ಅಕಾಡೆಮಿ/ಜಿಮ್-ಫಿಟ್ನೆಸ್ ಕೇಂದ್ರದ ಬಳಕೆದಾರರು ಆರೋಗ್ಯ ಸೇತು ಆಪ್ ಬಳಸುವುದನ್ನು ಉತ್ತೇಜಿಸುವುದು.

ಒಬ್ಬ ಜಿಮ್ ಬಳಕೆದಾರನಿಗೆ ಅಂದಾಜು 4 ಚದರ ಮೀಟರ್ ಸ್ಥಳಾವಕಾಶ ನಿಗದಿಪಡಿಸಿ, ಲಭ್ಯ ಸ್ಥಳಾವಕಾಶದ ಆಧಾರದಲ್ಲಿ ಒಂದು ಪಾಳಿಯಲ್ಲಿ ಭಾಗವಹಿಸುವ ಒಟ್ಟು ಬಳಕೆದಾರರು ಹಾಗೂ ಪ್ರಶಿಕ್ಷಕರ ಸಂಖ್ಯೆಯನ್ನು ನಿಗಧಿಪಡಿಸುವುದು. ಸಂಪರ್ಕ ರಹಿತ ನಗದು ವ್ಯವಹಾರ (ಕಾರ್ಡ್ ಮತ್ತು ಆನ್‌ಲೈನ್ ಪಾವತಿ ವ್ಯವಸ್ಥೆ) ಅಳವಡಿಸಿಕೊಳ್ಳುವುದು. ಜಿಮ್-ಫಿಟ್ನೆಸ್ ಕೇಂದ್ರದಲ್ಲಿ ಸಾಕಷ್ಟು ಪ್ರಮಾಣದ ಸೋಂಕು ನಿವಾರಕ ಕಾಗದ(Disinfection Wipes), ಪೇಪರ್ ಟವಲ್‌ಗಳನ್ನು ಒದಗಿಸತಕ್ಕದ್ದು ಹಾಗೂ ಬಳಕೆದಾರರಿಗೆ ಇವುಗಳನ್ನು ಬಳಸಿ ತಾವು ಬಳಸುವ ಉಪಕರಣಗಳನ್ನು ಶುಚಿಗೊಳಿಸಿಕೊಳ್ಳಲು ಉತ್ತೇಜಿಸತಕ್ಕದ್ದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಛಾಯಾಚಿತ್ರ ಲಗತ್ತಿಸಿದೆ)

## ವಿಡಿಯೋ ಕಾನ್ಫರೆನ್ಸ್ ಮೂಲಕ ವಿಚಾರಣೆ

ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ) :

ನೋವೆಲ್ ಕೊರೊನಾ ಕೋವಿಡ್-19 ವೈರಸ್ ಸೋಂಕಿನ ಹರಡುವಿಕೆ ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ಮಾಹಿತಿ ಆಯೋಗದಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರಡಿ ದಾಖಲಾಗಿರುವ ದ್ವಿತೀಯ ಮೇಲ್ಮನವಿ ಪ್ರಕರಣಗಳ ವಿಚಾರಣೆಯನ್ನು ತಾತ್ಕಾಲಿಕವಾಗಿ ಮತ್ತು ಪ್ರಯೋಗಾತ್ಮಕವಾಗಿ ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ಉದ್ದೇಶಿಸಲಾಗಿದೆ.

ಸದರಿ ಆನ್‌ಲೈನ್ ವಿಚಾರಣೆ ಪ್ರಕ್ರಿಯೆಯ ಬಗ್ಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರಗಳನ್ನು ಕರ್ನಾಟಕ ಮಾಹಿತಿ ಆಯೋಗದ ಜಾಲತಾಣ www.kic.gov.in ರಲ್ಲಿ ಅಳವಡಿಸಲಾಗಿದೆ ಎಂದು ಕರ್ನಾಟಕ ಮಾಹಿತಿ ಆಯೋಗದ ಅಧೀನ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಐ.ಎಂ.ಎ. ಹಗರಣ : ಚರ ಸ್ವತ್ತು ಹರಾಜು

ಬೆಂಗಳೂರು, ಆಗಸ್ಟ್ 4 (ಕರ್ನಾಟಕ ವಾರ್ತೆ)

ಬೆಂಗಳೂರು ದಕ್ಷಿಣ ತಾಲ್ಲೂಕಿನ ವಿಶೇಷ ತಹಸೀಲ್ದಾರ್ ಅವರು ಐ ಮಾನಿಟರಿ ಅಡ್ವೈಸರಿ **(IMA) AND ITS GROUP ENTITIES** ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ಅಧಿನಿಯಮ 2004 ಅಡಿಯಲ್ಲಿ ಚಿರಸ್ವತ್ತುಗಳನ್ನು ಹರಾಜು ಮಾಡಲು ಪ್ರಕಟಣೆ ಹೊರಡಿಸಿದ್ದಾರೆ.

1) ಫ್ರಂಟ್‌ಲೈನ್ ಫಾರ್ಮಸಿ ಯುನಿಟ್ ಐ.ಎಂ.ಎ ಹೆಲ್ತ್‌ಕೇರ್ ಪ್ರೈ. ಲಿ. ನಂಬರ್ 149/ಎ ನೆಲಮಹಡಿ, 5 ನೇ ಮುಖ್ಯ ರಸ್ತೆ, 6 ನೇ ಸೆಕ್ಟರ್ ಪುಡಿಸ್ತಾನ್ ರೆಸ್ಟೋರೆಂಟ್ ಹತ್ತಿರ, ಹೆಚ್.ಎಸ್.ಆರ್. ಬಡಾವಣೆ, ಬೆಂಗಳೂರು ಅಂದಾಜು ಮೌಲ್ಯ ರೂ. 3,31,000 2) ಫ್ರಂಟ್‌ಲೈನ್ ಪಾರ್ಮಸಿ, ಯುನಿಟ್ ಐ.ಎಂ.ಎ. ಹೆಲ್ತ್‌ಕೇರ್ ಪ್ರೈ ಲಿ. ಅಂಗಡಿ ನಂ. 898/1 ನೆಲಮಹಡಿ, ಕೋರಮಂಗಲ ಮುಖ್ಯರಸ್ತೆ, 6 ನೇ ಬ್ಲಾಕ್, ಕೋರಮಂಗಲ-ರೂ. 3,29,000 3) ಫ್ರಂಟ್‌ಲೈನ್ ಫಾರ್ಮಸಿ ಯುನಿಟ್, .ಐ.ಎಂ.ಎ. ಹೆಲ್ತ್‌ಕೇರ್ ಪ್ರೈ. ಲಿ. ಅಂಗಡಿ ನಂ. 343/34 2 ನೇ ಅಡ್ಡರಸ್ತೆ, 32 ನೇ ಇ ಅಡ್ಡರಸ್ತೆ, 4 ನೇ ಟಿ ಬ್ಲಾಕ್, ಜಯನಗರ -ರೂ. 1,74,000 4) ಪ್ರಂಟ್‌ಲೈನ್ ಫಾರ್ಮಸಿ ಯುನಿಟ್ ಐ.ಎಂ.ಎ. ಹೆಲ್ತ್‌ಕೇರ್ ಪ್ರೈ. ಲಿ. ನಂ. 8, ಅಡ್ಡರಸ್ತೆ, ನಂ. 170, ಕೆ.ಇ.ಬಿ. ಹೆ.ಬಿಸಿ.ಎನ್. ಬಡಾವಣೆ, ಬನ್ನೇರಘಟ್ಟ ಮುಖ್ಯರಸ್ತೆ, ಜಯದೇವ ಆಸ್ಪತ್ರೆ ಹತ್ತಿರ ಎದುರು, ಬಿ.ಟಿ.ಎಂ. 2 ನೇ ಹಂತ, ಬೆಂಗಳೂರು ರೂ. 2,85,000 5) ಪ್ರಂಟ್‌ಲೈನ್ ಫಾರ್ಮಸಿ ಯುನಿಟ್ ಐ.ಎಂ.ಎ. ಹೆಲ್ತ್‌ಕೇರ್ ಪ್ರೈ. ಲಿ. 187, 14 ನೇ ಅಡ್ಡರಸ್ತೆ, ಕೊತ್ತನೂರು ಮುಖ್ಯರಸ್ತೆ, ಪುಟ್ಟೇನಪಾಳ್ಯ, ಮಿಲೇನಿಯಂ ಅಪಾರ್ಟ್‌ಮೆಂಟ್ ಹತ್ತಿರ, 7 ನೇ ಹಂತ, ಜೆ.ಪಿ. ನಗರ, ಬೆಂಗಳೂರು ರೂ. 4,22,000/-6) ಐ.ಎಂ.ಎ. ಗೋಲ್ಡ್ ನಂ. 343/34 1 ನೇ ಮಹಡಿ, 32ನೇ ಇ ಮುಖ್ಯರಸ್ತೆ 4 ನೇ "ಟಿ" ಬ್ಲಾಕ್ ಜಯನಗರ, ಬೆಂಗಳೂರು -41 ಮೌಲ್ಯ ರೂ. 12,16,000 7) ಐ.ಎಂ.ಎ ಕೌನ್ಸಿಲ್ ಚಾರಿಟಬಲ್ ಸೊಸೈಟಿ ಫರ್ನಿಚರ್ ಗೋಡೌನ್ ನಂ. 30, ಮೈಕೋ ಬ್ಯಾಕ್‌ಗೇಟ್ ಎದುರು, ಬನ್ನೇರುಘಟ್ಟ ರಸ್ತೆ, ಬೆಂಗಳೂರು ರೂ. 16,80,000 8) ಐ.ಎಂ.ಎ. ಜ್ಯುವೆಲರ್ ನಂ. 47, ಮತ್ತು 48 ಅಂಚೆ ಕಛೇರಿ ಎದುರು 11 ನೇ ಮುಖ್ಯರಸ್ತೆ, ಜಯನಗರ, 4 ಬ್ಲಾಕ್ ಬೆಂಗಳೂರು . 48,78,000 ರೂ. ಗಳ ಮೌಲ್ಯಮಾಪನ ದರವಾಗಿದೆ.

ಇಲ್ಲಿರುವ **(Non Perishable)** ಪೀಠೋಪಕರಣಗಳು ಹಾಗೂ ಇತರೆ ವಸ್ತುಗಳನ್ನು ಹರಾಜು ಮಾಡಲು ಜಿಲ್ಲಾಧಿಕಾರಿಗಳಿಂದ ಅಧಿಕೃತ ಜ್ಞಾಪನಾ ಹೊರಡಿಸಲಾಗಿದೆ. ಸದರಿ ವಸ್ತುಗಳನ್ನು ಪರಿಶೀಲಿಸಿಕೊಂಡು ವೀಕ್ಷಿಸಲು ದಿನಾಂಕ 10-08-2020, 12-08-2020 ಮತ್ತು 14-08-2020 ರಂದು ನಿಗದಿಪಡಿಸಲಾಗಿದೆ. ಹರಾಜು ಪ್ರಕ್ರಿಯೆ (ಲೈವ್ ಬಿಡ್ಡಿಂಗ್) ದಿನಾಂಕ 17-08-2020 ರ ಬೆಳಿಗ್ಗೆ 11-00 ಗಂಟೆಯವರೆಗೆ ಚಾಲ್ತಿಯಲ್ಲಿರುತ್ತದೆ. ಹರಾಜಿಗೆ ಸಂಬಂಧಪಟ್ಟ ಷರತ್ತುಗಳು ಮತ್ತಿತರ ವಿವರಗಳಿಗೆ ವೆಬ್‌ಸೈಟ್

**www.eproc.karnataka.gov.in ನ್ನು ವೀಕ್ಷಿಸಬಹುದು ಎಂದು ವಿಶೇಷ ತಹಸೀಲ್ದಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

**ಕೆಎಸ್‌ಆರ್‌ಟಿಸಿಯ ಪೀಣ್ಯಾದ ಬಸವೇಶ್ವರ ಬಸ್ ನಿಲ್ದಾಣ ಈಗ ಕೋವಿಡ್ ಆರೈಕೆ ಕೇಂದ್ರ**

**ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ) :**

ಬೆಂಗಳೂರಿನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಲಕ್ಷಣಗಳಿಲ್ಲದ ರೋಗಿಗಳಿಗೆ ಆಸ್ಪತ್ರೆಗಳಲಿ ್ಲಅವಕಾಶ ಕಲ್ಪಿಸುವುದು ಕಷ್ಟಕರವಾಗುತ್ತಿದೆ. ಸರ್ಕಾರದ ಸಲಹೆಯಂತೆ, ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಲಕ್ಷಣರಹಿತ ಮತ್ತು ಸೌಮ್ಯ ಪ್ರಕರಣಗಳನ್ನು ನಿರ್ವಹಿಸಲು ಕೋವಿಡ್‌ಆರೈಕೆ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕೋವಿಡ್ ಆರೈಕೆ ಕೇಂದ್ರದ ಸ್ಥಾಪನೆಗಾಗಿ ನಗರದ ಪೀಣ್ಯ ಕೆಎಸ್‌ಆರ್‌ಟಿಸಿಯ ಬಸವೇಶ್ವರ ಬಸ್ ನಿಲ್ದಾಣವನ್ನು ಕೋವಿಡ್‌ಆರೈಕೆ ಕೇಂದ್ರವನ್ನಾಗಿ ಮಾರ್ಪಾಡಿಸಲಾಗಿದೆ.

ಪ್ರಸ್ತುತ ಕೇಂದ್ರವು ನಾಳೆಯಿಂದ ಕಾರ್ಯಾರಂಭ ಮಾಡಲಿದೆ. ರೋಟರಿ ಅಡ್ವಿ ಕಾಕೇರ್ ಫೌಂಡೇಶನ್ ಮತ್ತು ನಯೋನಿಕಾ ಐ ಟ್ರಸ್ಟ್ ಸಹಯೋಗದೊಂದಿಗೆ ಈ ಕೇಂದ್ರವನ್ನು ಸ್ಥಾಪಿಸಲು ಮುಂದಾಗಿರುತ್ತಾರೆ. ಈ ಕೇಂದ್ರವನ್ನು ನಿರ್ವಹಿಸಲು ವೈದ್ಯಕೀಯ ಪಾಲುದಾರರಾಗಿ ಪ್ರಕ್ರಿಯಾ ಆಸ್ಪತ್ರೆ, ನಾಗಸಂದ್ರ, ಬೆಂಗಳೂರು ಮತ್ತು ಟೈಟಾನ್‌ಸಂಸ್ಥೆ ಪ್ರಮುಖ ಹಣಕಾಸಿನ ಪಾಲುದಾರರಾಗಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲಾಗಿದೆ.

ಈ ಕೇಂದ್ರವನ್ನು 2020ರ ಆಗಸ್ಟ್ 5 ರ ಬುದವಾರದಂದು ಲಕ್ಷಣ ಸವದಿ, ಉಪಮುಖ್ಯ ಮಂತ್ರಿಗಳು, ಸಾರಿಗೆ ಇಲಾಖೆರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಿವಯೋಗಿ ಸಿ. ಕಳಸದ, ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್ ಟಿ ಸಿ, ಡಾ.ರಾಮ್ ನಿವಾಸ್ ಸೆಪಟ್, ಭಾಪೊಸೇ, ನಿರ್ದೇಶಕರು (ಭ&ಜಾ)/(ಸಿ&ಪ), ಡಾ.ಕೆ.ಅರುಣ್, ಭಾಪೊಸೇ, ನಿರ್ದೇಶಕರು (ಭ&ಜಾ), ಬಿಎಂಟಿಸಿ, ಡಾ ಶ್ರೀನಿವಾಸ್ ಚಿರುಕುರಿ ಸಿಇಒ, ಪ್ರಕ್ರಿಯಾ ಆಸ್ಪತೆಗಳು, ಶ್ರೀ ನಾಗೇಂದ್ರ ಪ್ರಸಾದ್, ಜಿಲ್ಲಾ ಗವರ್ನರ್, ಶ್ರೀ.ಪ್ರಶಾಂತ್, ನಯೊನಿಕಾ ಕಣ್ಣುಆಸ್ಪತ್ರೆ, ಶ್ರೀಧರ್, ಟೈಟಾನ್ ಕಂಪನಿ ರವರುಗಳು ಉಪಸ್ಥಿತರಿದ್ದರು.

ಕೊವಿಡ್ -19 ಗೆ ತುತ್ತಾಗಿ ಗುಣಮುಖರಾದ ಕೆ ಎಸ್‌ಆರ್ ಟಿ ಸಿ ಚಾಲಕ/ ನಿರ್ವಾಹಕ/ ಸಿಬ್ಬಂದಿಗಳಿಗೆ ಮಾನ್ಯ ಉಪಮುಖ್ಯಮಂತ್ರಿಗಳು ಹೂ ನೀಡಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಮಾತನಾಡುತ್ತಾ, ರಸ್ತೆ ಸಾರಿಗೆಯ ನಾಲ್ಕು ನಿಗಮಗಳ ಸುಮಾರು ಒಂದು ಸಾವಿರ ಸಿಬ್ಬಂದಿ ಕೊವಿಡ್ -19 ಗೆ ತುತ್ತಾಗಿದು 700 ಸಿಬ್ಬಂದಿಗಳು ಗುಣಮುಖರಾಗಿದ್ದಾರೆ, ಅವರುಗಳ ಯೋಗಕ್ಷೇಮ ನಮ್ಮ ಪ್ರಥಮ ಆದ್ಯತೆಯಾಗಿದ್ದು ಈ ಕೊವಿಡ್‌ಕೇರ್ ಸೆಂಟ ನಲ್ಲಿ ನಮ್ಮ

ಸಿಬ್ಬಂದಿಗಳಿಗೆ ಉಚಿತಚಿಕಿತ್ಸೆ ನೀಡಲಾಗುವುದು. ಮುಂಜಾಗ್ರತೆ ವಹಿಸಿ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು. ಸದರಿ ಬಸ್ ನಿಲ್ದಾಣವು ಈ ಒಳ್ಳೆಯ ಉದ್ದೇಶಕ್ಕೆ ಉಪಯೋಗವಾಗುತ್ತಿರುವುದು ಒಳ್ಳೆಯದು. ಈ ಕೇಂದ್ರಕ್ಕೆ ದಾಖಲಾಗುವ ರೋಗಿಗಳು ಗುಣಮುಖರಾಗಿ ತೆರಳಲಿ ಎಂದು ಆಶಿಸಿದರು.

**ಕೊವಿಡ್‌ಕೇರ್ ಕೇಂದ್ರ ಮಾಹಿತಿ:**

ಪೀಣ್ಯ ಬಸ್ ನಿಲ್ದಾಣದ ನೆಲಮಹಡಿ ಹಾಗೂ ಮೊದಲನೆ ಮಹಡಿಯಲ್ಲಿ, **ಈ ಕೇಂದ್ರವು ಮೊದಲನೆ ಹಂತದಲ್ಲಿ 200 ಹಾಸಿಗೆಗಳನ್ನು ಹೊಂದಿರುತ್ತದೆ.** ಪ್ರಕರಣಗಳ ಸಂಖ್ಯೆ ಹೆಚ್ಚಾದರೆ ಮತ್ತು ಬೇಡಿಕೆ ಹೆಚ್ಚಾದರೆಇನ್ನೂ 100 ಹಾಸಿಗೆಗಳನ್ನು ಸೇರಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಕೇಂದ್ರದಲ್ಲಿ ಪೂರ್ಣ ಸಮಯದ ದಾದಿಯರು, ವೈದ್ಯರು, ರೋಗಿಗಳ ಆರೈಕೆ ಮಾಡುವವರು, ಸ್ವಚ್ಛತಾಕಾರರು, ವ್ಯವಸ್ಥಾಪಕರು, ಬಿಲ್ಲಿಂಗ್‌ತಂಡ, ಸ್ವಾಗತಕಾರರು, ನಿರ್ವಹಣೆ ಮತ್ತು ಭದ್ರತಾ ತಂಡಗಳು ಇರಲಿವೆ. ರೋಗಿಗೆ ಆಸ್ಪತ್ರೆಯ ಆರೈಕೆ ಅಗತ್ಯವಿದ್ದಲ್ಲಿ, ಪ್ರಕ್ರಿಯಾ ಆಸ್ಪತ್ರೆ ತನ್ನ ಆಸ್ಪತ್ರೆಗಳಲ್ಲಿ ಅವಕಾಶ ಕಲ್ಪಿಸುತ್ತದೆ. ಕೇಂದ್ರದಲ್ಲಿ ಆಂಬ್ಯುಲೆನ್ಸ್ ಜೊತೆ ಆಕ್ಸಿಜನ್ ಸೌಲಭ್ಯ ಲಭ್ಯವಿರುತ್ತದೆ. ಸ್ವಾಬ್ ಸಂಗ್ರಹ ಕೇಂದ್ರವನ್ನು ಸಹ ಇಲ್ಲಿ ಸ್ಥಾಪಿಸಲಾಗಿದೆ.

**ಈ ಕೇಂದ್ರದಲ್ಲಿ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಈಶಾನ್ಯ ಸಾರಿಗೆ ಮತ್ತು ವಾಯವ್ಯ ಸಾರಿಗೆ ಉದ್ಯೋಗಿಗಳು ಮತ್ತು ಅವರ ಕುಟುಂಬಗಳಿಗೆ 50% ಹಾಸಿಗೆಗಳನ್ನು ಒದಗಿಸಲಾಗಿದೆ. ಈ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು.**ರೋಟರಿ ಮತು ್ತಟೈಟಾನ್‌ನಿಂದ ಉಲ್ಲೇಖಿಸಲಾದ ರೋಗಿಗಳಿಗೆ 10% ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ. ಸರ್ಕಾರ ಸೂಚಿಸಿದ ದರಗಳ ಪ್ರಕಾರ ರೋಗಿಗಳಿಗೆ ಶುಲ್ಕ ವಿಧಿಸಲಾಗುತ್ತದೆ. ಬಡವರು ಮತ್ತು ನಿರ್ಗತಿಕರಿಗೆ ಈ ಕೇಂದ್ರದಿಂದ ಅನುಕೂಲವಾಗಲಿದೆ.

ರೋಗಿಗಳಿಗೆಆಹಾರ ಮತ್ತು ಇತರ ಸೇವೆಗಳೊಂದಿಗೆ ಮೂಲ ವೈದ್ಯಕೀಯ ಸೇವೆಯನ್ನು ನೀಡಲಾಗುತ್ತದೆ. ಸದರಿ ಕೇಂದ್ರದಲ್ಲಿ ಶೌಚಾಲಯ, ಬಿಸಿನೀರಿನ ಸ್ನಾನದ ಸೌಲಭ್ಯ, ಶುದ್ಧಕುಡಿಯುವ ನೀರಿನ ವ್ಯವಸ್ಥೆ ಇದೆ. ಎಲ್ಲಾ ರೋಗಿಗಳಿಗೆ ಪೌಷ್ಠಿಕ ಆಹಾರವನ್ನು ನೀಡಲಾಗುವುದು. ಈ ಕೇಂದ್ರದಲ್ಲಿ ಸಿಬ್ಬಂದಿ ಇರಲು ಅವಕಾಶ ಕಲ್ಪಿಸಲಾಗಿದೆ.

ಸಿಬ್ಬಂದಿ ಮತ್ತು ವೈದ್ಯರುಗಳಿಗೆ ಸೋಂಕು ಹರಡದಂತೆ ಎಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲಾಗಿದೆ. ಈ ಕೇಂದ್ರದಲ್ಲಿ ಕೆಲಸ ಮಾಡುವ ಎಲ್ಲರಿಗೂ ಸಂಪೂರ್ಣ ಪಿಪಿಇ ಕಿಟ್‌ಗಳನ್ನು ಒದಗಿಸಲಾಗಿದೆ. ಕೇಂದ್ರವು ತುರ್ತು ವಾರ್ಡ್ ಮತ್ತು 10 ಹಾಸಿಗೆಗಳ ಐಸಿಯು ಹೊಂದಿದ್ದು, ಇದರಲ್ಲಿ ರೋಗಿಗಳ ಹಾಸಿಗೆಗಳು, ಮಾನಿಟರ್‌ಗಳು, ಆಮ್ಲಜನಕಪೂರೈಕೆ

ಮತ್ತು ಆಮ್ಲಜನಿಕ ಸಾಂದ್ರತೆಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಐಸಿಯು ಅನ್ನು ಟ್ರೈಟಾನ್‌ಕಂಪನಿಯು ಪ್ರಾಯೋಜಿಸುತ್ತಿದೆ. ರೋಗಿಗಳು ಆಸ್ಪತ್ರೆಯಲ್ಲಿ ಹಾಸಿಗೆ ಸಿಗುವವರೆಗೂ ಅವರನ್ನು ಇಲ್ಲಿ ತಾತ್ಕಾಲಿಕವಾಗಿ ನೋಡಿಕೊಳ್ಳಲಾಗುತ್ತದೆ, ಹೆಚ್ಚಿನ ವೈದ್ಯಕೀಯ ಅಗತ್ಯ ಕಂಡು ಬಂದಲ್ಲಿ ರೋಗಿಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಗುವುದು.

ಎಲ್ಲಾ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲಾಗಿದೆ. ಅಗತ್ಯವಿರುವ ರೋಗಿಗಳಿಗೆ ಹಾಸಿಗೆಗಳನ್ನು ಸುಲಭವಾಗಿ ಹಂಚಿಕೆ ಮಾಡಲು ಬಿಬಿಎಂಪಿ ಅಧಿಕಾರಿಗಳು, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಮತ್ತು ರೋಟರಿಯೊಂದಿಗೆ ಸಮನ್ವಯಇರುತ್ತದೆ.

## ಸಾರಿಗೆ ಸಂಜೀವಿನಿ ಅಂಬ್ಯುಲೆನ್ಸ್ ಚಾಲನೆ

**ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ) :** ಕೆ ಎಸ್ ಆರ್ ಟಿ ಸಿ, ಪ್ರಾದೇಶಿಕ ಕಾರ್ಯಾಗಾರ, ಬೆಂಗಳೂರಿನಲ್ಲಿ ಆಂತರಿಕವಾಗಿ ಲಭ್ಯವಿರುವ ವಸ್ತುಗಳಲ್ಲಿ ಮಿನಿ ಬಸ್ಸನ್ನು ಆಂಬ್ಯುಲೆನ್ಸ್ ಆಗಿ ನಿರ್ಮಿಸಲಾಗಿದ್ದು, ವೆಚ್ಚ ಸುಮಾರು 2.5 ಲಕ್ಷಗಳಾಗಿದೆ.

ತುರ್ತು ಸ್ಥಳದಿಂದ ಅಂಬ್ಯುಲೆನ್ಸ್‌ಗೆ ರೋಗಿಯನ್ನು ತ್ವರಿತವಾಗಿ ಮತ್ತು ಸುರಕ್ಷಿತವಾಗಿ ವರ್ಗಾಹಿಸಲು ಮತ್ತು ಆಸ್ಪತ್ರೆಯನ್ನು ತಲುಪಿದ ನಂತರ ತುರ್ತು ಕೋಣೆಗೆ ರೋಗಿಯನ್ನು ತ್ವರಿತವಾಗಿ ಮತ್ತು ಆರಾಮದಾಯಕವಾಗಿ ವರ್ಗಾಹಿಸಲು ಅನುಕೂಲವಾಗುವಂತೆ 2 ಸ್ಟ್ರೆಚರ್‌ಗಳನ್ನು ಹೊಂದಿದ ಅಂಬ್ಯುಲೆನ್ಸ್‌ನಲ್ಲಿ ನಿಂತಿದೆ.

ಬ್ಯಾಂಡೇಜ್, ಕ್ರಿಮಿನಾಶಕ, ಗಾಜ್ಡ್ರೆಸ್ಸಿಂಗ್, ಪ್ಲಾಸ್ಟರ್, ಕ್ರೆಪ್ಬ್ಯಾಂಡೇಜ್, ಡ್ರೆಸಿಂಗ್, ಕೈ ಗವಸುಗಳು, ಕತ್ತರಿ ಮತ್ತು ಚಿಮುಟಗಳು, ಮತ್ತು ಸೋಂಕು ನಿವಾರಕ ಪರಿಹಾರಗಳನ್ನು ಒಳಗೊಂಡಿರುವ ಪ್ರಥಮಚಿಕಿತ್ಸಾ ಕಿಟ್‌ಗಳನ್ನು ಹೊಂದಿರುವ ಅಂಬ್ಯುಲೆನ್ಸ್‌ನಲ್ಲಿ ಆಕ್ಸಿಜನ್, ಶುದ್ಧವಾದ ಅಮ್ಲಜನಕವನ್ನು ಕೃತಕವಾಗಿ ಒದಗಿಸುವ ಮೂಲಕ ರೋಗಿಯ ಜೀವವನ್ನು ಉಳಿಸಲು ಸಹಾಯ ಮಾಡುವ ಒಂದು ಆಮ್ಲಜನಕ ಸಿಲಿಂಡರನ್ನು ಅಂಬ್ಯುಲೆನ್ಸ್‌ನಲ್ಲಿ ಇರಿಸಲಾಗಿದೆ.

ಸಂಪೂರ್ಣ ಕ್ರಿಯಾತ್ಮಕ ಮತ್ತು ತುಂಬಿದ 1 ಕೆಜಿ ಅಗ್ನಿಶಾಮಕ ಯಂತ್ರವನ್ನು ಅಂಬ್ಯುಲೆನ್ಸ್‌ನಲ್ಲಿ ಇರಿಸಲಾಗಿದೆ. ಕೈ ತೊಳೆಯಲು ಸಲೂನ್ ನೊಳಗೆ 20 ಲೀಟರ್‌ನ ನೀರಿನ ಟ್ಯಾಂಕ್, ಮತ್ತೊಂದು ಟ್ಯಾಂಕ್ ನೀರು ಸಂಗ್ರಹಿಸಲು

ಒದಗಿಸಲಾಗಿದೆ. ಕೈ ತೊಳೆದು ನೀರನ್ನು ಸಂಗ್ರಹಿಸಲು ಪ್ರತ್ಯೇಕ ಪ್ಲಾಸ್ಟಿಕ್ ಟ್ಯಾಂಕ್ ಒದಗಿಸಲಾಗಿದೆ. ಡ್ರೈವರ್‌ಗೆ ಸುಲಭವಾದ ಪ್ರತ್ಯೇಕ ಚಾಲಕ ವಿಭಾಗವನ್ನು ಒದಗಿಸಲಾಗಿದೆ. ಸಿಸಿ ಕ್ಯಾಮೆರಾ ಒದಗಿಸಲಾಗಿದೆ. ಕೆಂಪು ಅಂಬ್ಯುಲೆನ್ಸ್‌ನ ಮುಂಭಾಗದ ಮೇಲ್ಭಾಗದಲ್ಲಿ ಕೆಂಪು ಮತ್ತು ನೀಲಿ ಬಣ್ಣ ಸೂಚಕ ಬೆಳಕನ್ನು ಮತ್ತು ಸೈರನ್ ಅಂಬ್ಯುಲೆನ್ಸ್‌ನಲ್ಲಿ ಜೋಡಿಸಲಾಗಿದೆ.

ಒಟ್ಟು 5 ಸಂಖ್ಯೆ 2 ಆಸನಗಳ ಪ್ರಯಾಣಿಕರ ಆಸನ ಚೌಕಟ್ಟುಗಳನ್ನು ಸಲೂನ್ ಒಳಗೆ ಒದಗಿಸಲಾಗಿದೆ. (ಚಾಲಕರಕ್ಯಾಬಿನ್ ಜೋಡನೆಗೆ ಎದುರಾಗಿರುವ ಸ್ಟ್ರೀಟ್ ಲೈಟ್‌ಗೆ 3 ಸಂಖ್ಯೆ ಮತ್ತು ರೋಗಿಗಳ ಹತ್ತಿರ ವಿರುವ ವಿರುದ್ಧ ದಿಕ್ಕಿನಲ್ಲಿ 1 ಸಂಖ್ಯೆ ನೀಲಿ ಬಣ್ಣದ ಕಿಟಕಿ ಪರದೆಗಳನ್ನು ಎರಡೂ ಕಡೆ ಒದಗಿಸಲಾಗಿದೆ. 4 ಫ್ಯಾನ್‌ಗಳನ್ನು ಅಳವಡಿಸಲಾಗಿದೆ. Foot operated sanitizer ಅನ್ನು ಒಳಗೆ ಅಳವಡಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಛಾಯಾಚಿತ್ರ ಲಗತ್ತಿಸಿದೆ)

## Peenya Sri Basaveswra Bus Station utilized as Converted to Covid Care Centre

**Bengaluru, July 5 , 2020(Karnataka Information):**

With the rising Covid cases in Bengaluru, it is becoming difficult to accommodate these Covid 19 positive Patients in various Hospitals in Bengaluru. As per the Government’s advice, Covid Care Centers are to be developed to manage Asymptomatic and mild cases in Covid care centers.

KSRTC has provided the (Ground floor and first floor) Sri Basweshwara Bus Station premises in Peenya, Bengaluru for the establishment of Covid care center. Rotary in association with Advika Care Foundation and Nayonika Eye Trust have come forward to set up this Center. Prakriya Hospitals, Nagasandra, Bengaluru will be the medical partner managing this center. Titan is the major funding partner.

This has been developed as a Public- Private partnership, which will have 200 beds in Phase 1 and can add another 100 beds if the number of cases increase and the demand goes up. The center will be open for Admission from 6th August 2020.

The center was inaugurated on Wednesday 5th August 2020 by Laxman S. Savadi, Deputy Chief Minister, Transport Department, Govt.of Karnataka. Shivayogi C. Kalasad, IAS, Managing Director, KSRTC, Dr.Ram Nivas Sepat IPS, Director (S&V)/(P&E), KSRTC, Dr.K. Arun IPS, Director (S&V), BMTC, Dr.Srinivas Chirukuri, CEO, Prakriya Hospitals, Nagendra Prasad, Rotary District Governor, Prashanth, Nayonika Eye Trust, Sridhar, TITAN and other dignitaries were present on the occassion.

Deputy Chief Minister, Transport, while speaking to the recovered staff, drivers and conductors, requested them to maintain social distance and wear a face mask while performing duty. There are 1000 staff tested covid -19 positive in all the four transport corporation, out of which 700 recovered. He expressed his happiness that at least the said bus station is utilised for the good purpose and help our staff to treat without any cost.

**The center has provided 50% of the beds for KSRTC, BMTC, NWKRTC and NEKRTC employees and their families. These patients will be treated free of cost.**10% of the beds have been reserved for Patients referred from Rotary and Titan. These patients will be charged as per Government indicated rates.

This facility will have full time nurses, doctors, Patient care attenders, housekeeping, manager on Duty, billing team, receptionist, maintenance and

security teams. Ambulance with Oxygen facility will be available at the center. Swab collection center has been set up. Patients will receive basic medical service along with food and other services. The center has clean toilets, bathing facility with hot water, clean drinking water. The nutritious food will be provided to all Patients. Provision has been made for the staff to stay at the center (24x7 basis).

If the patient needs Hospital care, Prakriya Hospital will make provision in its own Hospitals. All precautions have been taken to ensure that the staff and doctors are protected from infection. Complete PPE kits will be provided for all working in this center.

The center has an Emergency ward and a 10 bed ICU, which is equipped with Patient cots, monitors, Oxygen supply and Oxygen concentrators. The ICU set up is being sponsored by TITAN company. Patients who need Hospitalisation will be kept temporarily in the centre, till they find a bed in the hospital, if medically it is required to be sent to such hospitals.

We hope that the poor and the needy will benefit from this center. We have ensured that all safety precautions have been taken. There will be coordination with the BBMP,KSRTC, BMTC and Rotary for easy allocation of beds for the needy Patients.

**SARIGE SANJEEVINI (AMBULANCE KA07 F1770)**

Midi Bus converted with the available materials in Regional Workshop Bengaluru, KSRTC at a cost of Rs. 2.5 lakhs. Ambulance equipped with 2 stretchers with foldable back rests to facilitate a quick and comfortable transfer of the patient from

the emergency site to the ambulance and upon reaching the hospital, to the emergency room.Ambulance equipped with first-aid kit containing essentials like bandages, sterile gauze dressings, plasters, crepe bandages,adhesive dressings, disposable gloves, scissors and tweezers, and disinfectant sterile solutions.

One oxygen cylinder to save a patient’s life to provide clean oxygen artificially. D fully functional 2 kg fire extinguisher.Steel wash basin with 20 Itr water tank. 1 no. of separate plastic tank provided to store the Hand washed water. Wall mounting 4 no. small fans provided inside the saloon. Separate driver partition provided with glass flap door and sliding glass window frame assembly for easy saloon vision to driver.

CC camera provided. Ambulance siren assembly with red & blue colour indicator light on top of the ambulance. Total 5 nos. of 2 seater passenger seat for comfortable journey for assistants. (3 nos. of seat frame assembly facing towards driver's cabin assembly & 1 no. each opposite direction nearer to patient berth). Blue colour window curtains provided on both sides with hooks. Foot operated hand sanitizer stand provided near front foot board. Rear side big flap doors are provided along with foldable foot step says press release.